# ಉಗ್ರರ ಅಟ್ಟಹಾಸ

2015ರ ಭಯಾನಕ ಘಟನೆ ನಡೆದದ್ದು ಪ್ಯಾರಿಸ್‌ನಲ್ಲಿ. ಡಿಸೆಂಬರ್ ತಿಂಗಳ ಚಳಿಯನ್ನೂ ನಡುಗಿಸುವಂತೆ 15ಕ್ಕೂ ಹೆಚ್ಚು ಶಸ್ತ್ರಸಜ್ಜಿತ ‘ಐಸಿಸ್’ ಭಯೋತ್ಪಾದಕರು ಪ್ಯಾರಿಸ್ ನಗರದ 6 ಕಡೆಗಳಲ್ಲಿ ದಾಳಿ ನಡೆಸಿ ಮನಬಂದಂತೆ ಗುಂಡು ಹಾರಿಸಿದರು. 200 ಜನರು ಸಾವಿಗೀಡಾದ ಹಿನ್ನೆಲೆಯಲ್ಲೇ ನಗರದಾದ್ಯಂತ ತುರ್ತುಸ್ಥಿತಿ ಘೋಷಿಸಲಾಯಿತು. ಇದಕ್ಕೆ ಪ್ರತೀಕಾರವೆಂಬಂತೆ ಅಮೆರಿಕ, ರಷ್ಯಾ, ಫ್ರಾನ್ಸ್, ಬ್ರಿಟನ್ ಸೇನೆಗಳು ಜಂಟಿಯಾಗಿ ಸಿರಿಯಾದಲ್ಲಿರುವ ಐಸಿಸ್ ಉಗ್ರರ ನೆಲೆಗಳ ಮೇಲೆ ನಿರಂತರ ಬಾಂಬ್ ದಾಳಿ ನಡೆಸಿದವು.

ರಷ್ಯಾದ ಪ್ರಯಾಣಿಕ ವಿಮಾನವೊಂದು ಈಜಿಪ್ಟ್ ಬಳಿ ಪತನವಾಗಿ ಅದರಲ್ಲಿದ್ದ 224 ಜನರೂ ಸಾವಿಗೀಡಾದರು. ವಾರದ ಬಳಿಕ ಇದು ಐಸಿಸ್ ಉಗ್ರರ ಕೃತ್ಯ ಎಂಬ ಸುದ್ದಿ ಬಂತು. ಅಫ್ಘಾನಿಸ್ತಾನದ ಕಂದಹಾರ್‌ನಲ್ಲಿ ತಾಲಿಬಾನ್ ಉಗ್ರರು ನಡೆಸಿದ ಗುಂಡಿನ ದಾಳಿಗೆ 37 ಜನರು ಬಲಿಯಾದರು. ರೊಮೇನಿಯಾದ ನೈಟ್ ಕ್ಲಬ್ ನಲ್ಲಿ ನಡೆದ ಸ್ಫೋಟದಲ್ಲಿ 27 ಜನರು ಸಾವಿಗೀಡಾದರು. ಬ್ಯಾಂಕಾಕ್‌ನಲ್ಲಿ ಬ್ರಹ್ಮದೇಗುಲದ ಬಳಿ ನಡೆದ ಸ್ಫೋಟದಲ್ಲಿ 27 ಜನರು ಮೃತಪಟ್ಟರು.

ಸಿರಿಯಾದ ಮೇಲೆ ಅಮೆರಿಕ ಮತ್ತು ಮಿತ್ರರಾಷ್ಟ್ರಗಳ ವೈಮಾನಿಕ ದಾಳಿಯಿಂದ ಲಕ್ಷಾಂತರ ಜನ ನಿರಾಶ್ರಿತರಾಗಿ ಬೇರೆ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಈ ವಲಸಿಗರಿಗೆ ಯೂರೋಪಿನ ದೇಶಗಳು ಆಶ್ರಯ ನೀಡುತ್ತಿವೆ. ವಲಸೆ ಹೊರಟ ಕುಟುಂಬವೊಂದರ ಮಗು ‘ಆಯ್ಲನ್’ ಮೃತದೇಹ ಕಡಲ ತೀರದಲ್ಲಿ ದೊರಕಿತು. ಈ ಮಗುವಿನ ಚಿತ್ರ ಮಾಧ್ಯಮಗಳಲ್ಲಿ ಪ್ರಕಟವಾಗಿ ಇಡೀ ಜಗತ್ತೇ ತಲ್ಲಣಗೊಂಡಿತು.



ಬೆಂಗಳೂರಿನಲ್ಲಿ ಐಸಿಸ್ ಉಗ್ರರಿಗೆ ಮಾಹಿತಿ ಜಾಲದ ಮೂಲಕ ನೆರವಾಗುತ್ತಿದ್ದ ಆರೋಪದ ಮೇಲೆ ಮೆಹದಿ ಎನ್ನುವ ಪಶ್ಚಿಮ ಬಂಗಾಳದ ಯುವಕನನ್ನು ಬಂಧಿಸಿದ್ದು, ದೇಶವೇ ಬೆಚ್ಚಿ ಬೀಳುವಂತಾಯಿತು. ಪಂಜಾಬ್‌ನ ಗುರುದಾಸ್‌ಪುರ ಬಳಿ ಜುಲೈ 27ರಂದು ಬಸ್ ಮೇಲೆ ದಾಳಿ ನಡೆಸಿದ ಬಂದೂಕುಧಾರಿಗಳು 8 ಜನರನ್ನು ಕೊಂದುಹಾಕಿದರು.

ದುರಂತ: ಮಕ್ಕಾದಲ್ಲಿ ಹಜ್ ಯಾತ್ರೆಯ ಸಂದರ್ಭದಲ್ಲಿ ಜನರ ನೂಕುನಲುಗ್ಗಲು ಹೆಚ್ಚಾಗಿ 116 ಯಾತ್ರಿಕರು ಕಾಲ್ತುಳಿತಕ್ಕೆ ಸಿಕ್ಕು ಮೃತರಾದದ್ದು ದೊಡ್ಡ ದುರಂತ.

ಕಾದುನೋಡಬೇಕು. ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಹವಾಮಾನ ಬದಲಾವಣೆಯ ಶೃಂಗಸಮ್ಮೇಳನದಲ್ಲೂ ದೆಹಲಿಯ ದುಸ್ಥಿತಿ ಚರ್ಚೆಯಾಯಿತು.

## ಸಾಧನೆಯ ಶಿಖರದಲ್ಲಿ..

ಈ ಎಲ್ಲ ವಿವಾದ– ವಿಷಾದಗಳ ಮಧ್ಯೆಯೂ ಭಾರತದ ಹಲವು ಸಾಧಕರು, ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಕೀರ್ತಿಪತಾಕೆಯನ್ನು ಎತ್ತಿ ಹಿಡಿದರು. ಆಗಸ್ಟ್ ತಿಂಗಳಲ್ಲಿ ಗೂಗಲ್ ಇನ್‌ಕಾರ್ಪೊರೇಶನ್ ಸಂಸ್ಥೆಯ ಸಿಇಒ ಆಗಿ ಭಾರತದ ಸುಂದರ್‌ರಾಜ್ ಪಿಚೈ ನೇಮಕದ ಆದೇಶ ಹೊರಬಿದ್ದದ್ದು ದೇಶಕ್ಕೆ ಹೆಮ್ಮೆ ತಂದ ಘಟನೆ. ಈಗಾಗಲೆ ಮೈಕ್ರೊಸಾಫ್ಟ್‌ನ ಸಿಇಒ ಸತ್ಯಾ ನಾಡೆಲ್ಲ, ಪೆಪ್ಸಿಕೋ ಕಂಪೆನಿಯ ಮುಖ್ಯಸ್ಥೆ ಇಂದ್ರಾ ನೂಯಿ, ನೋಕಿಯಾ ಕಂಪೆನಿಯ ಸಿಇಒ ರಾಜೀವ್ ಸೂರಿ ಭಾರತದ ಪ್ರತಿಭೆಯಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಯುತ್ತಿದ್ದು, ಆ ಸಾಲಿಗೆ ಈ ವರ್ಷ ಸುಂದರ್ ಪಿಚೈ ಸೇರಿಕೊಂಡಿದ್ದಾರೆ.

ಕ್ರೀಡಾರಂಗದಲ್ಲಿ ಸಾನಿಯಾ ಮಿರ್ಜಾ ಮತ್ತು ಸೈನಾ ನೆಹ್ವಾಲ್ ಭಾರತದ ಕೀರ್ತಿಪತಾಕೆಯನ್ನು ಎತ್ತಿ ಹಿಡಿದಿದ್ದಾರೆ. ಟೆನಿಸ್‌ನಲ್ಲಿ ಸಾನಿಯಾ ತನ್ನ ಗೆಳತಿ ಮಾರ್ಟಿನಾ ಹಿಂಗಿಸ್ ಜತೆ ಸೇರಿ ‘ವಿಶ್ವದ ನಂಬರ್ ಒನ್ ಮಹಿಳಾ ಡಬಲ್ಸ್ ಜೋಡಿ’ ಎಂಬ ಹೆಗ್ಗಳಿಕೆ ಸಾಧಿಸಿದ್ದಾರೆ. ಹಾಗೆಯೇ ಸೈನಾ ನೆಹ್ವಾಲ್ ಸಿಂಗಲ್ಸ್ ಬ್ಯಾಡ್ಮಿಂಟನ್‌ನಲ್ಲಿ ‘ವಿಶ್ವ ನಂಬರ್ ಒನ್’ ಪಟ್ಟ ಗಳಿಸಿ ಭಾರತಕ್ಕೆ ಹೆಮ್ಮೆ ತಂದಿದ್ದಾರೆ.

ಭಾರತದ ಮಹಿಳಾ ಹಾಕಿ ತಂಡ 36 ವರ್ಷಗಳ ಬಳಿಕ ಒಲಿಂಪಿಕ್ಸ್‌ನಲ್ಲಿ ಆಡಲು ಅರ್ಹತೆ ಪಡೆದದ್ದು ಇನ್ನೊಂದು ಸಂತೋಷದ ಸುದ್ದಿ. ಐಪಿಎಲ್ ಕ್ರಿಕೆಟ್‌ನಲ್ಲಿ ಫಿಕ್ಸಿಂಗ್ ಆರೋಪದಲ್ಲಿ ಸಿಕ್ಕುಬಿದ್ದ ಚೆನ್ನೈ ಸೂಪರ್ ಕಿಂಗ್ ಮತ್ತು ರಾಜಸ್ತಾನ ರಾಯಲ್ಸ್ ತಂಡಗಳನ್ನು ಐಪಿಎಲ್‌ನಿಂದ ಎರಡು ವರ್ಷಗಳ ಅವಧಿಗೆ ನಿಷೇಧಿಸಿದ್ದು ಅಭಿಮಾನಿಗಳಿಗೆ ಕಹಿಯಾದರೂ ಕ್ರಿಕೆಟ್‌ಗೆ ಸಿಹಿಯಾದ ಸುದ್ದಿ. ಒಂದು ದಿನದ ಕ್ರಿಕೆಟ್‌ನಲ್ಲಿ ಭಾರತ ಇನ್ನೂ ಶಕ್ತಿಶಾಲಿಯಾಗಿ ಉಳಿದಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಮಹೇಂದ್ರಸಿಂಗ್ ದೋನಿಯ ನಾಯಕತ್ವ ವಿಫಲವಾದರೂ, ಪರ್ಯಾಯ ನಾಯಕನಾಗಿ ವಿರಾಟ್ ಕೊಹ್ಲಿ ತಂಡಕ್ಕೆ ಹಲವು ಜಯಗಳನ್ನು ತಂದಿತ್ತಿದ್ದಾರೆ. ಕ್ರಿಕೆಟ್‌ನ ಸಮೂಹ ಸನ್ನಿ ಈ ವರ್ಷವೂ ಮುಂದುವರಿದಿದೆ.

2015

## ಮರೆಯಬಾರದ ಅಂಶಗಳು

ಎಲ್ಲ ಸುದ್ದಿಗಳನ್ನು ಗುಳೇ ಹಾಕಿದರೂ, ಈ ವರ್ಷ ಭಾರತೀಯರು ಮರೆಯಬಾರದ, ಮರೆಯಲೂ ಆಗದ ಸುದ್ದಿಗಳನ್ನು ನಿರ್ಲಕ್ಷಿಸುವಂತಿಲ್ಲ.

‘ನಿರ್ಭಯಾ’ ಹೋರಾಟ




ವೈಯಕ್ತಿಕ ಸಾಧನೆಗಳು ಎಷ್ಟೇ ಇದ್ದರೂ, ಒಂದು ದೇಶ ಸಾಮೂಹಿಕವಾಗಿ ನಡೆಸುವ ಪ್ರಯತ್ನಗಳಷ್ಟೇ ಆ ದೇಶವನ್ನು ಅಭಿವೃದ್ಧಿಯ ಮುಂಚೂಣಿಯಲ್ಲಿ ನಿಲ್ಲಿಸಬಲ್ಲವು ಎನ್ನುವುದು ವಾಸ್ತವ. ಆ ನಿಟ್ಟಿನಲ್ಲಿ ಭಾರತೀಯರಿಗೆ ಅತ್ಯಂತ ಕಹಿ ಎನ್ನಿಸುವಂತಹ ಕೆಲವು ಸಂಗತಿಗಳನ್ನು ಗಮನಿಸಬಹುದು.

‘ವಾಟರ್‌ಏಯ್ಡ್’ ಎನ್ನುವುದು ಲಂಡನ್ ಕೇಂದ್ರಿತ ಅಂತರರಾಷ್ಟ್ರೀಯ ಸ್ವಯಂಸೇವಾ ಸಂಸ್ಥೆ. ಜಗತ್ತಿನ ಎಲ್ಲ ದೇಶಗಳ ಮಾನವ ಸಂಪನ್ಮೂಲ ಬಳಕೆಯ ಕುರಿತು ಈ ಸಂಸ್ಥೆ ಗಮನಾರ್ಹ ವಿವರಗಳನ್ನು ಪ್ರಕಟಿಸುತ್ತಿದೆ. ಈ ವರ್ಷ ಈ ಸಂಸ್ಥೆ ಪ್ರಕಟಿಸಿದ ಪ್ರಕಾರ, ಭಾರತದಲ್ಲಿ ಇಡೀ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಜನರಿಗೆ ಸ್ವಂತ ಶೌಚಾಲಯ ಇಲ್ಲ. ಭಾರತದಲ್ಲಿ ಎಷ್ಟು ಕೋಟಿ ಜನರು ಮನೆಯಲ್ಲಿ ಶೌಚಾಲಯ ಹೊಂದಿಲ್ಲ ಎಂದರೆ, ಈ ಜನರನ್ನು ಸಾಲಾಗಿ ಕ್ಯೂ ನಿಲ್ಲಿಸಿದರೆ ದೆಹಲಿಯಿಂದ ಚಂದ್ರನಲ್ಲಿಯವರೆಗೆ ಕ್ಯೂ ಬೆಳೆಯಬಹುದು! ನೈರ್ಮಲ್ಯ ಕ್ರಾಂತಿಗಾಗಿ ದೇಶದಲ್ಲಿ ಏನೆಲ್ಲ ಪ್ರಯತ್ನಗಳು ನಡೆದಿವೆ. ಪ್ರತಿದಿನ ಟಿವಿ ಯಲ್ಲಿ ಚಿತ್ರನಟಿ ವಿದ್ಯಾ ಬಾಲನ್ ಬಂದು, ‘ಮನೆಯಲ್ಲಿ ಟಾಯ್ಲೆಟ್ ನಿರ್ಮಿಸಿ, ಹೆಣ್ಣುಮಕ್ಕಳ ಘನತೆ ಕಾಪಾಡಿ’ ಎಂದು ಕಂಠಶೋಷಣೆ ಮಾಡಿಕೊಂಡರೂ ಈ ವಿಷಯದಲ್ಲಿ ದೇಶದ ಪ್ರಗತಿ ಅಷ್ಟಕ್ಕಷ್ಟೆ ಎನ್ನುವುದು ಏನನ್ನು ಸೂಚಿಸುತ್ತದೆ?

ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಈ ವರ್ಷವೂ ಭಾರತವನ್ನು ಎಡೆಬಿಡದೆ ಕಾಡಿದ ವ್ಯಾಧಿ. ಕಳೆದ ವರ್ಷ ನಡೆದ ದೆಹಲಿಯ ನಿರ್ಭಯಾ ಅತ್ಯಾಚಾರ ಪ್ರಕರಣದ ಪ್ರತಿಧ್ವನಿ ಈ ವರ್ಷವೂ ಕೇಳಿಸಿತು. ವರ್ಷದ ಕೊನೆಯಲ್ಲಿ ನಿರ್ಭಯ ಅತ್ಯಾಚಾರ ಪ್ರಕರಣದ ಆರೋಪಿಗಳಲ್ಲಿ ಒಬ್ಬನಾದ ಬಾಲಾಪರಾಧಿಗೆ ಬಿಡುಗಡೆ ಸಿಕ್ಕಿತು. ಆತ ತಪ್ಪಿತಸ್ಥನಾಗಿದ್ದರೂ 18 ವರ್ಷಕ್ಕಿಂತ ಕೆಳಗಿನವನು ಎನ್ನುವುದು ಬಿಡುಗಡೆಗೆ ಕೋರ್ಟ್ ನೀಡಿದ ಕಾರಣ. ನೂರಾರು ಮಹಿಳೆಯರು ಇದನ್ನು ಪ್ರತಿಭಟಿಸಿ ಬೀದಿಗಿಳಿದರು. ನಿರ್ಭಯಾಳ ತಾಯಿಯೇ ಪ್ರತಿಭಟನೆಯ ನೇತೃತ್ವ ವಹಿಸಿದರು. ರಾಷ್ಟ್ರೀಯ ಮಹಿಳಾ ಆಯೋಗ ಈ ಬಾಲಪರಾಧಿಗೆ ಶಿಕ್ಷೆ ವಿಧಿಸಬೇಕೆಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರೂ ಸಾಧ್ಯವಾಗಲಿಲ್ಲ. ಕೊನೆಗೂ ರಾಜ್ಯಸಭೆಯಲ್ಲಿ ಚರ್ಚೆಯಾಗದೆ ಉಳಿದುಕೊಂಡಿದ್ದ, ಬಾಲಾಪರಾಧಿಗಳ ನ್ಯಾಯಿಕ ಮಸೂದೆ ತರಾತುರಿಯಲ್ಲಿ ‘ಪಾಸ್’ ಆಗಿ, ಬಾಲಾಪರಾಧಿಗಳೆಂದು ಪರಿಗಣಿಸುವ ವಯಸ್ಸನ್ನು 18ರಿಂದ 16ಕ್ಕೆ ಇಳಿಸಲಾಯಿತು.

ಬಿಹಾರದ ಮಹಾಚುನಾವಣೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಯನ್ನು ಮಣ್ಣು ಮುಕ್ಕಿಸಿದ ನಿತೀಶ್‌ಕುಮಾರ್– ಲಾಲೂ ಯಾದವ್ ಜೋಡಿ ರಾಜಕೀಯ ರಂಗದಲ್ಲಿ ಹೊಸ ಕಂಪನಗಳನ್ನು ಉಂಟು ಮಾಡಿದೆ. ಮಾಧ್ಯಮಗಳ ಎಲ್ಲ ಲೆಕ್ಕಾಚಾರ– ಸಮೀಕ್ಷೆಗಳನ್ನೂ ತಲೆಕೆಳಗೆ ಮಾಡಿದ ನಿತೀಶ್‌ಕುಮಾರ್, ಬಿಹಾರದ ಮುಖ್ಯಮಂತ್ರಿಯಾಗಿ ಮೂರನೇ ಬಾರಿಗೆ ಅಧಿಕಾರ ವಹಿಸಿಕೊಂಡಿದ್ದಾರೆ.

ಎರಡು ಹೊಸ ಸಿನಿಮಾಗಳ ಮೂಲಕ ತಲಾ 200 ಕೋಟಿ ರೂಪಾಯಿಗಳ ಕಲೆಕ್ಷನ್‌ಗೆ ಕಾರಣವಾಗಿ ಬಾಲಿವುಡ್‌ನಲ್ಲಿ ದಾಖಲೆ ನಿರ್ಮಿಸಿದ ಸಲ್ಮಾನ್ ಖಾನ್, ವರ್ಷದ ಕೊನೆಗೆ ‘ಗುದ್ದೋಡು ಪ್ರಕರಣ’ದಲ್ಲಿ ಹೈಕೋರ್ಟಿನಲ್ಲಿ ಶಿಕ್ಷೆ ತಪ್ಪಿಸಿಕೊಂಡದ್ದು ‘ಬಿಗ್‌ಬುಲೆಟಿನ್’ ಸುದ್ದಿ.

‘ಮಿಸ್ ಯೂನಿವರ್ಸ್’ ಕಿರೀಟ ಗೆಲ್ಲುವುದು ಸುಲಭವಲ್ಲ. 4 ಲಕ್ಷ ಅಮೆರಿಕನ್ ಡಾಲರ್ ಮೌಲ್ಯದ, 10 ಕ್ಯಾರೆಟ್ ಡೈಮಂಡ್‌ನ ಈ ಕಿರೀಟ ತಲೆಗೆ ಬಂದೂ ಕೈತಪ್ಪಿದ್ದು ಕೊಲಂಬಿಯಾ ಸುಂದರಿ ಅರಿಯಾಡ್ನಾ ಗುಟೆರೆಜ್‌ಳ ದುರದೃಷ್ಟ. ಫೈನಲ್ ಸಮಾರಂಭದಲ್ಲಿ ಅನೌನ್ಸ್ ಮಾಡುವಾತ ಕಣ್ತಪ್ಪಿನಿಂದ ಈಕೆಯ ಹೆಸರನ್ನು ಘೋಷಿಸಿದ. ಈಕೆಯ ತಲೆಗೆ ಕಿರೀಟವನ್ನು ಇಡಲಾಯಿತು. ಆದರೆ 90 ಸೆಕೆಂಡ್‌ಗಳಲ್ಲೇ ತಪ್ಪಿನ ಅರಿವಾಗಿ ಆತ ತನ್ನನ್ನು ತಿದ್ದಿಕೊಂಡು, ಫಿಲಿಪೀನ್ಸ್‌ನ ಸುಂದರಿ ಪಿಯಾ ಅಲೋಂಜೊ ಹೆಸರು ಘೋಷಿಸಿದ. ಕಿರೀಟ ಆಕೆಯ ತಲೆಗೇರಿತು!



ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಯಲು ಹಲವು ಉಪಕ್ರಮಗಳನ್ನು ಸರ್ಕಾರಗಳು ಘೋಷಿಸಿವೆ. ಮೊಬೈಲ್‌ನಲ್ಲಿ ರಕ್ಷಾ ಎನ್ನುವ ಆ್ಯಪ್ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಮೂಲಕ ಅಪಾಯದಲ್ಲಿ ಸಿಲುಕಿದಾಗ ಸಂಬಂಧಿಸಿದವರಿಗೆ ಮಾಹಿತಿಗಳನ್ನು ಕಳುಹಿಸಬಹುದು. ಅದಕ್ಕಿಂತ ಮುಖ್ಯವಾಗಿ ಇನ್ನು ಮುಂದೆ ಮೊಬೈಲ್ ತಯಾರಿಸುವ ಕಂಪೆನಿಗಳು ಮೊಬೈಲ್‌ನಲ್ಲಿ ಕಡ್ಡಾಯವಾಗಿ ‘PANIC BUTTON’ (ಎಚ್ಚರಿಕೆಯ ಕರೆಗುಂಡಿ) ಬಟನ್’ ಅಳವಡಿಸಬೇಕೆಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ವರ್ಷದ ಕೊನೆಗೆ ಭಾರತದಲ್ಲಿ ಮೊಬೈಲ್ ಬಳಕೆದಾರರ ಸಂಖ್ಯೆ 50 ಕೋಟಿಗೆ ಏರಿದೆ. ವಿಶ್ವದ ಒಟ್ಟು ಮೊಬೈಲ್ ಬಳಕೆದಾರರಲ್ಲಿ ಶೇಕಡಾ 13ರಷ್ಟು ಜನ ಭಾರತದಲ್ಲಿದ್ದಾರೆ! ಚೀನಾ ಬಿಟ್ಟರೆ ನಾವೇ ‘ನಂಬರ್ ಒನ್!’ ಆದರೆ ಇದು ಸಂತೋಷದ ಸಾಧನೆಯೋ, ದುಃಖದ ಸಂಗತಿಯೋ ಎಂದು ಪಟ್ಟಿ ಮಾಡುವುದು ಕಷ್ಟಸಾಧ್ಯ. ಏಕೆಂದರೆ, ಈ ವರ್ಷ ಪ್ರಕಟವಾದ ವಿಶ್ವದ “Happiness Index’ ಪ್ರಕಾರ, 158 ದೇಶಗಳ ಪಟ್ಟಿಯಲ್ಲಿ ಭಾರತವು ನಿಕೃಷ್ಟ ಎನ್ನಬಹುದಾದ 117ನೇ ಸ್ಥಾನದಲ್ಲಿದೆ! (2013ರಲ್ಲಿ 111ನೇ ಸ್ಥಾನದಲ್ಲಿದ್ದ ಭಾರತ, 2014ರಲ್ಲಿ 117ನೇ ಸ್ಥಾನಕ್ಕೆ ಕುಸಿದಿತ್ತು.) Sustainable development solutions network (NSDN) ಪ್ರಕಟಿಸುವ ಈ ಪಟ್ಟಿಯಲ್ಲಿ ಮುಖ್ಯವಾಗಿ ಆರು ಅಂಶಗಳನ್ನು ಮಾನದಂಡಗಳಾಗಿ ಪರಿಗಣಿಸಲಾಗುತ್ತದೆ. ಅವುಗಳೆಂದರೆ– ಒಟ್ಟು ದೇಶೀಯ ಉತ್ಪನ್ನದ ತಲಾವಾರು ಹಂಚಿಕೆ, ಜನರ ಆರೋಗ್ಯಕರ ಆಯುಷ್ಯ, ಬದುಕಿಗೆ ಇರುವ ಆಯ್ಕೆಯ ಸ್ವಾತಂತ್ರ್ಯ, ಭ್ರಷ್ಟಾಚಾರದಿಂದ ಸ್ವಾತಂತ್ರ್ಯ, ಉದಾರತೆ ಮತ್ತು ಬದುಕಿನ ಗುಣಮಟ್ಟ. ಈ ಪಟ್ಟಿಯಲ್ಲಿ ಪಾಕಿಸ್ತಾನ 81ನೇ ಸ್ಥಾನ ಪಡೆದಿದ್ದರೆ, ಬಾಂಗ್ಲಾದೇಶ 109ನೆ ಸ್ಥಾನ ಪಡೆದಿದೆ ಎನ್ನುವುದು ತುಲನಾತ್ಮಕವಾಗಿ ನಾವು ಎಷ್ಟು ಹಿಂದುಳಿದಿದ್ದೇವೆ ಎನ್ನುವುದನ್ನು ಸೂಚಿಸುತ್ತದೆ.

ಒಟ್ಟಾರೆ 2015 ಭಾರತದ ಮಟ್ಟಿಗೆ ವಿವಾದ, ವಿಷಾದಗಳ ವರ್ಷವೇ. ಹರ್ಷಕ್ಕೆ ಕಾರಣವಾದ ಅಂಶಗಳು ಕಡಿಮೆ. ವಿವಾದಗಳಂತೂ ಭೂತದಂತೆ ಬೆನ್ನಟ್ಟಿ ಬಂದಿವೆ. ■